ಮುಖ್ಯ ಮಂತ್ರಿಯವರ ಕಛೇರಿಯಲ್ಲಿ ಕನ್ನಡ ಕಂಪ್ಯೂಟರ್ ಯಂತ್ರವನ್ನು ಬಳಸುವ ಬಗ್ಗೆ

೪೦೯. ಶ್ರೀ ಎ. ಕೃಷ್ಣಪ್ಪ (ವರ್ತೂರು) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .—

(ಅ) ವಿಧಾನ ಸೌಧದ ಮುಖ್ಯ ಮಂತ್ರಿಗಳ ಕಛೇರಿಯಲ್ಲಿರುವ ಇಂಗ್ಲೀಷ್ ಕಂಪ್ಯೂಟರ್ ಯಂತ್ರಕ್ಕೆ ಮತ್ತು ಕೊಠಡಿಯನ್ನು ಸಿದ್ಧಗೊಳಿಸಲು ಆದ ಖರ್ಚು ಎಷ್ಟು ?

(ಆ) ಕನ್ನಡ ಕಂಪ್ಯೂಟರ್ ಯಂತ್ರದ ಉಪಯೋಗ ಪಡೆದುಕೊಳ್ಳಲು ಇರುವ ತೊಂದರೆ ಯಾದರೂ ಏನು ?

(ಇ) ಕನ್ನಡ ಕಂಪ್ಯೂಟರ್ ಯಂತ್ರವನ್ನು ಅಳವಡಿಸಲು ತಗಲುವ ಖರ್ಚಾದರೂ ಎಷ್ಟು ಮತ್ತು ಯಾವಾಗ ಈ ಯಂತ್ರವನ್ನು ಕೊಳ್ಳಲು ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವುದು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು) .—

(ಅ) ಯಂತ್ರಕ್ಕೆ —ರೂ. ೪,೦೦,೦೦೦-೦೦
ಕೊಠಡಿಗೆ —ರೂ. ೮೧,೫೫೮-೦೦

(ಆ) ಪ್ರಸ್ತುತ ಇರುವ ವರ್ಕ್ ಪಾರ್ಸ್—೧೧ ಹೆಚ್.ಪಿ.ಎಲ್. ಕಂಪ್ಯೂಟರ್ ಹಳೆಯ ಮಾದರಿಯಾಗಿದ್ದು ಅದರಲ್ಲಿ ಕನ್ನಡ ಉಪಯೋಗಿಸಲು ಅಸ್ಪದವಿರುವುದಿಲ್ಲ.

(ಇ) ಕನ್ನಡವನ್ನು ಉಪಯೋಗಿಸಲು ಸಾಧ್ಯವಾಗುವ ಮತ್ತು ಹೆಚ್ಚಿನ ಸಾಮರ್ಥ್ಯವಿರುವ ಕಂಪ್ಯೂಟರ್‌ನ್ನು ಕೊಂಡುಕೊಳ್ಳಲು ಈಗಾಗಲೇ ನಿರ್ಣಯ ತೆಗೆದುಕೊಳ್ಳಲಾಗಿದ್ದು ಸೂಕ್ತವಾದ ಮಾದರಿಯ ಆಯ್ಕೆಯಾಗಬೇಕಾಗಿದೆ. ಖರ್ಚು ಮಾದರಿಯನ್ನು ಅವಲಂಬಿಸಿರುತ್ತದೆ. ಒಟ್ಟಿನಲ್ಲಿ ಸಾಧ್ಯವಿದಷ್ಟಲ್ಲಿ ಈ ಕ್ರಮವನ್ನು ಕೈಗೊಳ್ಳಲಾಗುವುದು.

ಬೆಂಗಳೂರಿನ ಕೃಷ್ಣರಾಜಪುರಂ ಇ.ಎಸ್.ಐ. ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದು

೩೦೫. ಶ್ರೀ ಎ. ಕೃಷ್ಣಪ್ಪ (ವರ್ತೂರು) .—ಮಾನ್ಯ ಕಾರ್ಮಿಕ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಬೆಂಗಳೂರಿನ ಕೃಷ್ಣರಾಜಪುರಂನಲ್ಲಿ ಇರುವ ಇ.ಎಸ್.ಐ. ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಉದ್ದೇಶಿಸಿದೆಯೇ ?

(ಆ) ಹಾಗಿದ್ದಲ್ಲಿ ಎಂದಿನಿಂದ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗುವುದು ? ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ. ಹೆಚ್. ಪಾಟೀಲ್ (ಕಾರ್ಮಿಕ ಮತ್ತು ಕಂದಾಯ ಸಚಿವರು) .—

(ಅ) ಬೆಂಗಳೂರಿನ ಕೃಷ್ಣರಾಜಪುರಂನಲ್ಲಿ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯವಿದ್ದು, ಚಿಕಿತ್ಸಾಲಯವನ್ನು ಮೇಲ್ದರ್ಜೆಗೇರಿಸಲು ಕಾರ್ಮಿಕ ರಾಜ್ಯ ವಿಮಾ ನಿಗಮದ ಸೂತ್ರದ ಅನುಸಾರ ಅವಕಾಶವಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ಇಂದಿರಾನಗರ ಮತ್ತು ರಾಜಾಜಿನಗರ ಇ.ಎಸ್.ಐ. ಆಸ್ಪತ್ರೆಗಳಲ್ಲಿದ್ದ ಟಿ. ಬಿ. ವಾರ್ಡ್‌ಗಳನ್ನು ಸ್ಥಳಾಂತರಿಸುವ ಬಗ್ಗೆ.

೩೦೪ ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬೆಂಗಳೂರು ಇಂದಿರಾನಗರ ಮತ್ತು ರಾಜಾಜಿನಗರ ಇ.ಎಸ್.ಐ. ಆಸ್ಪತ್ರೆಗಳಲ್ಲಿದ್ದ ಟಿ.ಬಿ. ವಾರ್ಡ್‌ಗಳು ಸ್ಥಳಾಂತರವಾಗಿರುವುದು ನಿಜವಲ್ಲವೆ?